ಬಂದಿದ್ದ ಇತರ ಉದ್ಯೋಗಸ್ಥರು ಕಾರ್ಮಿಕರು, ಗೃಹಿಣಿಯರು, ಹರಟೆ ಕಟ್ಟೆಯ ಸೋಮಾರಿಗಳು– ಎಲ್ಲರೂ, ತೊಡೆಯ ಮೇಲೆ ಹಾಕಿಕೊಂಡೋ ಸೊಂಟದ ಮೇಲೆ ಇಟ್ಟು ಕೊಂಡೋ ಕೂಸುಗಳಿಗೆ ಮೊಲೆ ಚೀಪಿಸುತ್ತಿದ್ದ ತಾಯಿಯರು, ಅಮ್ಮಣ್ಣಿಚೀಲದಿಂದ ತೆಗೆಯುತ್ತ ಎಲೆಯಡಿಕೆ ಕಡ್ಡಿಪುಡಿಗಳನ್ನು ಸಾಂಗೋಪಾಂಗವಾಗಿ ಜಗಿಯುತ್ತಿರುವವರು, ಬೀಡಿ, ಸಿಗರೇಟು ಹೊಗೆಯ ನರಚಿಮಣಿಗಳು, ತುಂಡು ರೊಟ್ಟಿ, ಉಂಡೆ, ಚಕ್ಕುಲಿ ತಿಂಡಿಗಳನ್ನು ತಿನ್ನುತ್ತಲೋ ಆಟ ಚೆಲ್ಲಾಟ ಬೈಗಳ ಬಡಿದಾಟಗಳಲ್ಲಿ ತೊಡಗಿಯೋ ಅಳು ನಗು ಆರ್ಭಟಗಳ ಎಳೆಯರು. ಗುಜುಗುಜು, ಗಟ್ಟಿಮಾತು, ಕೂಗಾಟ ಎಲ್ಲೆಲ್ಲೂ. ಬಯಲಾಟಕ್ಕೆ ಸೇರಿದ ಜನರ ಗದ್ದಲ, ಸಂಭ್ರಮ.

ಈ ಜನ ಪ್ರಾಣಿಸಮೂಹದ ಮುಂದೆ, ದೇವಸ್ಥಾನದ ಕಲ್ಯಾಣ ಮಂಟಪದಲ್ಲಿ ಮಧ್ಯ ಅಂಕಣದ ಎಡ ಕಂಬದ ಬಳಿ ಗೌಡರು, ಪಟೇಲರು, ಶಾನುಭೋಗರು, ಪೂಜಾರಪ್ಪನವರು, ಅಂಗಡಿಸೆಟ್ಟರು, ಮೇಷ್ಟ್ರರು ಮುಂತಾಗಿ ಗ್ರಾಮ ಪ್ರಮುಖರು ಸೇರಿ ನಿಂತು ಮುಂದಿನ ಕಾರ್ಯಕ್ರಮದ ಬಗ್ಗೆ ಮಾತಾಡಿಕೊಳ್ಳುತ್ತಿದ್ದರು. ಟಿಫಿನ್ ಕಾಫಿ ಮುಗಿಸಿಕೊಂಡು ಬರುವುದಕ್ಕಾಗಿ ಮನೆಗೆ ಹೋಗಿದ್ದ ಸಾಹುಕಾರರು ಹಿಂತಿರುಗಿ ಬರುವುದನ್ನು ಕಾಯುತ್ತಿದ್ದರು.

ಅದೇ ಮಧ್ಯ ಅಂಕಣದ ಬಲ ಕಂಬಕ್ಕೆ ಹಗ್ಗದಿಂದ ಬಿಗಿದು ಹೀನಕೃತ್ಯಕಾರ ಮಹಾಪಾಪಿ ಕಳ್ಳ ಮೂಗ, ಗುಳಿಕಣ್ಣು, ಮೂಳೆ ಮೂಳೆ ಮೈ, ಬಿಳಿ ಪೊದೆಗೂದಲ ತಲೆ, ಗಡ್ಡ, ಮೀಸೆ, ಮಂಡಿಯ ಮೇಲಿನ ಮೋಟು ಮಾಸಲು ಹರಕು ಪಂಚೆ, ಅಲ್ಲಿ ಇಲ್ಲಿ ರಕ್ತ ಒಸರಿದ ಬಾಸುಂಡೆ ಬರೆಗಳು. ಅಲ್ಲೊಂದು ಇಲ್ಲೊಂದು ಹುಳಿತ ಹಲ್ಲಿದ್ದ ಬಾಯಿ ತೆಗೆಯುತ್ತ ಮುಚ್ಚುತ್ತ, ಅಸ್ಪಷ್ಟ ಶಬ್ದ ಮಾಡುತ್ತ, ಅಂಕಣದ ಮಧ್ಯೆ, ಗರ್ಭಗುಡಿಯ ತೆರೆದ ಬಾಗಿಲಿನಿಂದ, ನಂದಾದೀಪದ ಮಂಕು ಬೆಳಕಿನಲ್ಲಿ, ಪೀತಾಂಬರಧಾರಿ ಕರಿಯ ಕಲ್ಲಿನ ಮುದ್ದು ನವನೀತ ಗೋಪಾಲಸ್ವಾಮಿ ಪರಮಾತ್ಮ, ಮಂದಹಾಸ ಬೀರುತ್ತ.

ಜನರ ಗುಜುಗುಜು ಹೆಚ್ಚಾಯಿತು. ಬಹಳ ಮಂದಿ ಹಿಂತಿರುಗಿ ನೋಡಿದರು. ಸದ್ದು ಕಡಮೆಯಾಯಿತು. ಸಾಹುಕಾರರು ಅತ್ತಿತ್ತ ಅರುಗುತ್ತಿದ್ದ ಜನರ ಮಧ್ಯೆ ಜಾಗಮಾಡಿಕೊಂಡು ಹಾಯ್ದು ಮುಂದೆ ಬಂದು ದೇವಸ್ಥಾನದ ಒಳಗೆ ನಡೆಯುತ್ತಿದ್ದರು.

'ಆ... ಆ' ಮೂಗ ಸಾಹುಕಾರರನ್ನು ಕಾಣುತ್ತಲೆ ಬಾಯಿ ತೆರೆದು ಶಬ್ದ ಮಾಡಿದ.

'ಲೇ ಕಳ್ಳ ಬಡ್ಡೀಮಗನೆ!... ಬಾಯಿಬಿಡ್ತೀಯ. ಮುಚ್ಚು ಸಾಕು!' ಸಾಹುಕಾರರು ಹತ್ತಿರ ಸರಿದು ಮೂಗನ ಕೆನ್ನೆಗೆ ಬಾರಿಸಿದರು.

ಮೂಗ ಬಾಯಿ ಮುಚ್ಚಿಕೊಂಡ.

'ಥೂ ನಿನ್ನವ್ವನ್... ನಿಂಗೆ ಚೆನ್ನಾಗಿ ಉಗಿಬೇಕು, ಎಲ್ಲಾರು. ಊರೋರೆಲ್ಲ ಒದೀರಿ ಇವನ್ನ' ಸಾಹುಕಾರರು ಮೂಗನ ಮುಖಕ್ಕೆ ಉಗುಳಿ ಮಾದರಿ ಹಾಕಿದರು. ಬಳಿಕ ನಡೆದ ಉಗಿತ ಒದೆತ ಸ್ಪರ್ಧೆಯ ಸಂಭ್ರಮ ಆತುರ ನೂಕು ನುಗ್ಗಲಿನಲ್ಲಿ ಎಷ್ಟೋ ಜನರ ಉಗುಳು ಮೂಗನಿಗೆ ತಲುಪದೆ ಅವರಿವರು ತಮ್ಮವರ ಮೇಲೆಯೇ ಬೀಳುತ್ತಿತ್ತು, ಒಬ್ಬರು ಎತ್ತಿದ ಕಾಲು ಇನ್ನೊಬ್ಬರಿಗೆ ತಗಲಿ ತಮ್ಮಲ್ಲೇ ಒಬ್ಬರನ್ನೊಬ್ಬರು ಒದ್ದಂತಾಗುತ್ತಿತ್ತು. ಅಲ್ಲಲ್ಲೇ ಇದ್ದ ಸಣ್ಣಮಕ್ಕಳೂ ಹಿಂದೆ ಬೀಳದೆ ಹಿರಿಯರನ್ನು ಅನುಸರಿಸಿ ಮೂಗನ ಬಳಿಗೆ ಹೋಗಿ ಅವನ ಮೈಮೇಲೆ ಆದಷ್ಟು ಎತ್ತರಕ್ಕೆ ಯಥಾನುಶಕ್ತಿ ಉಗುಳಿದರು. ಕೆಲವರು ಪುಟ್ಟ ಹಿಡಿಗಳಲ್ಲಿ ಮಣ್ಣು ಕಲ್ಲುಗಳನ್ನು ತಂದು ಎರಚಿದರು. ಪುಟ್ಟಕಾಲುಗಳನ್ನೆತ್ತ ಒದ್ದೂ ಒದೆಯುವಂತೆ ಪ್ರಯತ್ನಿಸಿದರು.

'ಇವನ್ನ ಸಿಗಿದ್‌ಆಕ್‌ಬ್ಯಾಕು! ಬುಡ್‌ಬ್ಯಾಡ್ದು ಬಡ್ಡೀ ಹೈದನ್ನ ಜೀವಸೈತ' ಜನರಿಂದಲೇ